ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ ಜಿಲ್ಲೆ, ಬಳ್ಳಾರಿ–583101

OFFICE OF THE DEPUTY COMMISSIONER, BELLARY DISTRICT, BELLARY 583101

Telephone : 08392-277100. Fax : 08392-272538 Email: dcbellary@gmail.com

ಸಂ:ಕಂ:ಭೂಮಿ/41/2017–18 ದಿನಾಂಕ:– 06 –07–2017

ಇವರಿಗೆ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕಂದಾಯ ಇಲಾಖೆ
ಬಹುಮಹಡಿಗಳ ಕಟ್ಟಡ
ಡಾ// ಬಿ.ಆರ್.ಅಂಬೇಡ್ಕರ್ ವೀಧಿ
ಬೆಂಗಳೂರು – 01.

ಮಾನ್ಯರೇ,

ವಿಷಯ:– ಕರ್ನಾಟಕ ವಿಧಾನ ಸಭೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯಲ್ಲಿ ದಾಖಲೆಯಾಗಿರುವ ಅರ್ಜಿ ಸಂಖ್ಯೆ 84/2017 ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

ಉಲ್ಲೇಖ:– 1) ಸರ್ಕಾರದ ಪತ್ರ ಸಂಖ್ಯೆ/ಆರ್.ಡಿ/39/ಎಲ್.ಜಿ.ಇ/2017 ದಿ04–07–17.
2) ತಹಶೀಲ್ದಾರರು ಸಂಡೂರು ಇವರ ಪತ್ರ ಸಂಖ್ಯೆ/ಕಂ/ಭೂಮಿ/ /17–18 ದಿನಾಂಕ 04–07–17.
3) ಆಯುಕ್ತರು ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳು ಬೆಂಗಳೂರು ಇವರ ಪತ್ರ ಸಂಖ್ಯೆ/1025/2016 ದಿನಾಂಕ 15–06–17.

* * * * *

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದ ಅನ್ವಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಬೆಂಗಳೂರು. ಶ್ರೀ.ಈ.ತುಕಾರಾಂ ಮಾನ್ಯ ಲೋಕೋಪಯೋಗಿ ಸಚಿವರ ಸಂಸದೀಯ ಕಾರ್ಯದರ್ಶಿಗಳು ಹಾಗೂ ಶಾಸಕರು ಸಂಡೂರು ವಿಧಾನಸಭಾ ಕ್ಷೇತ್ರ ಇವರು ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಮಾನ್ಯ ಅಧ್ಯಕ್ಷರಿಗೆ ಸಲ್ಲಿಸಿರುವ ಮನವಿಯಲ್ಲಿ ನಮೂದಾಗಿರುವ ವಿಷಯಗಳ ಬಗ್ಗೆ ಪರಿಶೀಲಿಸಿ, ಅಗತ್ಯ ದಾಖಲೆಗಳೊಂದಿಗೆ ದಿನಾಂಕ 07–07–2017 ರಂದು ಮಧ್ಯಾಹ್ನ 1.00 ಗಂಟೆಗೆ ವಿಧಾನ ಸೌಧ ಬೆಂಗಳೂರಲ್ಲಿ ಸಭೆಗೆ ಹಾಜರಾಗಲು ನಿರ್ದೇಶಿಸಿರುತ್ತಾರೆ.

ಶ್ರೀ.ಈ.ತುಕಾರಾಂ ಮಾನ್ಯ ಲೋಕೋಪಯೋಗಿ ಸಚಿವರ ಸಂಸದೀಯ ಕಾರ್ಯದರ್ಶಿಗಳು ಹಾಗೂ ಶಾಸಕರು ಸಂಡೂರು ವಿಧಾನಸಭಾ ಕ್ಷೇತ್ರ ಇವರು ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಲಾಗಿ ತಹಶೀಲ್ದಾರರು ಸಂಡೂರು ಇವರು ಈ ಕೆಳಗಿನಂತೆ ವರದಿ ಮಾಡಿರುತ್ತಾರೆ.

1. <u>ಕಮ್ಮತ್ತೂರು ಗ್ರಾಮದಲ್ಲಿ ರೈತರನ್ನು ಒಕ್ಕಲೆಬ್ಬಿಸುತ್ತಿರುವ ಬಗ್ಗೆ:–</u>

ದೇವಗಿರಿ (ಕಮ್ಮತ್ತೂರು) ಗ್ರಾಮದ ಸರ್ವೆ.ನಂ. 01 ಮೂಲತಃ ಇನಾಂ ಜಮೀನು ಆಗಿದ್ದು, ಆಕಾರಬಂದ್ ಪ್ರಕಾರ ಸರ್ವೆ ನಂ. 01 ಒಟ್ಟು ವಿಸ್ತೀರ್ಣ 862.36 ಎಕರೆ ಇದ್ದು 1967–68

ರ ಪಹಣಿಯಲ್ಲಿ ಶ್ರೀ ಕುಮಾರಸ್ವಾಮಿ ಇನಾಂ ಎಂದು ನಮೂದಾಗಿರುತ್ತದೆ. ಪಹಣಿಯನ್ನು ಪರಿಶೀಲಿಸಲಾಗಿ ಕಾಲಂ ನಂ 10 ರಲ್ಲಿ ಲಿಂಗಪ್ಪನ ಮಗ ನಾಯಕರ ಮಲಿಯಪ್ಪ ಪಿ. 2.22 ಎಕ್ರೆ ಜಮೀನು ಕಾಲಂ 10 ರಲ್ಲಿ (ಕಬ್ಜೆ ಅಥವಾ ಸ್ವಾಧೀನತೆಯ ರೀತಿ) ನಮೂದಾಗಿರುತ್ತದೆ. ಹೊರತುಪಡಿಸಿ ಯಾವುದೇ ವ್ಯಕ್ತಿಯ ಹೆಸರುಗಳು ಸದರಿ ಪಹಣಿಯಲ್ಲಿ ನಮೂದಾಗಿರುವುದಿಲ್ಲ. ತದನಂತರ 1972 ರಲ್ಲಿ ಎಸ್.ಎಂ.ಡಿ.ಸಿ ಕಂಪನಿಯವರಿಗೆ ಪಿ. 392.75 ಎಕರೆ (159.01 ಹೆಕ್ಟೇರ್) ಪ್ರದೇಶವನ್ನು ಗಣಿ ಗುತ್ತಿಗೆಗಾಗಿ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲಾಗಿರುತ್ತದೆ. ತದನಂತರ ತಹಶೀಲ್ದಾರರು ಸಂಡೂರು ಇವರಿಗೆ 1991–92 ನೇ ಸಾಲಿನಲ್ಲಿ ಸದರಿ ಜಮೀನನ್ನು ಮಂಜೂರು ಮಾಡುವಂತೆ ಫಾರಂ–1 ಸಲ್ಲಿಸಿದ ರೈತರಿಗೆ ಯಾವುದೇ ಅಳತೆ ಕಾರ್ಯ ಕೈಗೊಳ್ಳದೇ, ನಕಾಶೆ ಇಲ್ಲದೇ, ನಡವಳಿ ಇಲ್ಲದೇ ಗಡಿಗುರುತುಗಳನ್ನು ಮಾಡದೇ ಚೆಕ್ಕುಬಂದಿಯು ಇಲ್ಲದೇ ಫಾರಂ–2 ನ್ನು ನೀಡಿರುವುದು ಕಂಡುಬರುತ್ತದೆ. ಎಂದು ತಹಶೀಲ್ದಾರರು ವರದಿ ಮಾಡಿರುತ್ತಾರೆ.

2. <u>ಕಾರ್ತಿಕೇಶ್ವರ ಗ್ರಾಮದ ಸ.ನಂ 1 ರಲ್ಲಿ ವಿಸ್ತೀರ್ಣ 1307 ಎಕರೆ ಜಮೀನಿನ ಬಗ್ಗೆ:–</u>

ಕಾರ್ತಿಕೇಶ್ವರ ಗ್ರಾಮದಲ್ಲಿ ಸರ್ವೆ ನಂ. 1 ಖಾತ್ರಿ ಅಮ್ಮ, ಬಿಚ್ಚು, ವಿಸ್ತೀರ್ಣ 1307.62 ಎಕರೆ ಇರುತ್ತದೆ. ಸದರಿ ಸ.ನಂನ 1967–68 ರ ಪಹಣಿಯಲ್ಲಿ ಶ್ರೀ ಕುಮಾರಸ್ವಾಮಿ ಇನಾಂ ಎಂದು ನಮೂದಾಗಿರುತ್ತದೆ. ಈ ಸ.ನಂನಲ್ಲಿ ಸಾಗುವಳಿ ಮಾಡುತ್ತಿರುವ ಬಗ್ಗೆ ಪಹಣಿಯಲ್ಲಿ ನಮೂದು ಇರುವುದಿಲ್ಲ. ಹಾಗೂ ಹಾಲಿ ಸದರಿ ಜಮೀನು ಗುಡ್ಡ ಪ್ರದೇಶದಿಂದ ಕೂಡಿದ್ದು, ಸದರಿ ಸ.ನಂನಲ್ಲಿ ಶ್ರೀ ಕುಮಾರಸ್ವಾಮಿ ದೇವಸ್ಥಾನ ಹಾಗೂ ಸುಬ್ಬರಾಯನಹಳ್ಳಿ ಕ್ಯಾಂಪ್ ಸಹ ಬರುತ್ತದೆ. ಹಾಗೂ ಈ ಜಮೀನಿನಲ್ಲಿ ಹಾಲಿ ಯಾರೂ ಸಾಗುವಳಿ ಹಾಗೂ ಅನುಭವದಲ್ಲಿ ಇರುವುದಿಲ್ಲ. ಸದರಿ ಗ್ರಾಮದಲ್ಲಿಯೂ ಸಹ ಸರ್ವೆ ಸೆಟ್ಲಮೆಂಟ್ ಕಾರ್ಯ ಪ್ರಗತಿಯಲ್ಲಿರುತ್ತದೆ.

3. <u>ಆಕಾಶ್ ನಗರ ಹಾಗೂ ಶಾಂತಿನಗರ ಕ್ಯಾಂಪಿನ ಜನರನ್ನು ಒಕ್ಕಲೆಬ್ಬಿಸುತ್ತಿರುವ ಬಗ್ಗೆ:–</u>

ಆಕಾಶನಗರ ಮತ್ತು ಶಾಂತಿನಗರ ಕ್ಯಾಂಪ್‌ಗಳಲ್ಲಿ ಕೆಲವು ಜನರು ಮನೆಗಳನ್ನು ನಿರ್ಮಿಸಿಕೊಂಡು ವಾಸ ಮಾಡುತ್ತಿದ್ದು, ಸದರಿ ಪ್ರದೇಶವು ಸ್ವಾಮಿಮಲೈ ಬ್ಲಾಕ್ ಅರಣ್ಯ ಪ್ರದೇಶವಾಗಿರುತ್ತದೆ. ಸದರಿ ಎರಡೂ ಕ್ಯಾಂಪ್‌ಗಳಿಗೆ ಹೋಗುವ ರಸ್ತೆಯು ಒಂದು ಭಾಗವು ಸ.ನಂ 351 ರಲ್ಲಿ ಬರುತ್ತದೆ. ಈ ಪ್ರದೇಶವು ಎಸ್.ಎಂ.ಡಿ.ಸಿ. ಕಂಪನಿ ಇವರಿಗೆ ಭೂ ಸ್ವಾಧೀನವಾಗಿದ್ದು, ಸದರಿ ಕಂಪನಿಯವರು ತಮ್ಮ ಓರ್ ಟ್ರಾಫಿಕ್‌ಗಾಗಿ ರಸ್ತೆ ನಿರ್ಮಾಣ ಮಾಡಿಕೊಂಡಿದ್ದು, ಸದರಿ ರಸ್ತೆಯ ಮೂಲಕ ಈ ಎರಡೂ ಕ್ಯಾಂಪ್‌ಗಳಿಗೆ ಹಿಂದಿನಿಂದಲೂ ರಸ್ತೆ ಸಂಪರ್ಕವಿದ್ದು, ಸದರಿ ರಸ್ತೆಗೆ ಎಸ್.ಎಂ.ಡಿ.ಸಿ.ರವರು ಕಾಂಪೌಂಡ್ ಗೋಡೆಯನ್ನು ನಿರ್ಮಾಣ ಮಾಡಲು ಮುಂದಾಗಿದ್ದು, ಇದಕ್ಕೆ ಸ್ಥಳೀಯ ಜನರು ಆಕ್ಷೇಪಣೆ ವ್ಯಕ್ತಪಡಿಸುತ್ತಾರೆ. ಸದರಿ ಪ್ರಕರಣದ [illegible]

ಇವರ ಅಧ್ಯಕ್ಷತೆಯಲ್ಲಿ ಸ್ಥಳಪರಿಶೀಲನೆ ಮಾಡಿ ಸದರಿ ರಸ್ತೆಯು ಈ ಹಿಂದಿನಿಂದಲೂ ವಿವಿಧ ಕ್ಯಾಂಪ್‌ಗಳ ಜನರು ಉಪಯೋಗಿಸುತ್ತಿರುವುದರಿಂದ ಹಾಲಿ ಕಾಂಪೌಂಡ್ ಗೋಡೆ ಒಡೆದು ಮೊದಲಿನಂತೆ ರಸ್ತೆಗೆ ಉಪಯೋಗಿಸಿಕೊಳ್ಳಲು ಅನುವು ಮಾಡಿಕೊಡಲಾಯಿತು. ಎಂದು ತಹಶೀಲ್ದಾರರು ವರದಿ ಮಾಡಿರುತ್ತಾರೆ.

ತಹಶೀಲ್ದಾರರು ಸಂಡೂರು ಇವರು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಮೇಲ್ನೋಟಕ್ಕೆ ಕಂಡುಬರುತ್ತವೆ.

1) ಕಮ್ಮತ್ತೂರು (ದೇವಗಿರಿ) ಗ್ರಾಮದ ಸ.ನಂ 01 ರಲ್ಲಿ ಮೆ// ಎನ್.ಎಂ.ಡಿ.ಸಿ ಲಿಮಿಟೆಡ್ ಇವರಿಗೆ ದೇವಗಿರಿ ಗ್ರಾಮದ ಸ.ನಂ 01 ರಲ್ಲಿ ಎಂ.ಎಲ್.ನಂ 1111 ನ್ನು ಮೊದಲನೇಯದಾಗಿ 1972 ರಿಂದ 2002 ರ ವರೆಗೆ ಮತ್ತು ಎರಡನೇ ಬಾರಿ 2002 ರಿಂದ 2022 ರ ವರೆಗೆ ಗಣಿಗುತ್ತಿಗೆ ಮಂಜೂರು ಆಗಿರುತ್ತದೆ. ಸದರಿ ಪ್ರದೇಶಕ್ಕೆ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ನೇಮಕಗೊಂಡಿರುವ ಸೆಂಟ್ರಲ್ ಎಂಪವರ್ಡ್ ಕಮಿಟಿ (ಸಿ.ಇ.ಸಿ) ಇವರಿಂದ ನಕ್ಷೆಯು ಅನುಮೋದನೆಗೊಂಡಿರುತ್ತದೆ. ಈ ನಕ್ಷೆಯನ್ನು ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ತಮ್ಮ ಆದೇಶ ದಿನಾಂಕ 18-04-2013 ರಲ್ಲಿ ಅನುಮೋದನೆ ನೀಡಿರುತ್ತಾರೆ, ಆದ್ದರಿಂದ ಸದರಿಯವರು ತಮ್ಮ ಗಣಿಗುತ್ತಿಗೆ ಪ್ರದೇಶಕ್ಕೆ ತಂತಿಬೇಲಿ ಹಾಕಿರುತ್ತಾರೆ. ಆದಾಗ್ಯೂ ರೈತರಿಗೆ ನಮೂನೆ-1 ರಲ್ಲಿ ಪಟ್ಟಾ ನೀಡಿರುವ ಜಮೀನುಗಳು ಸದರಿ ಗಣಿಗುತ್ತಿಗೆ ಪ್ರದೇಶದಲ್ಲಿ ಸೇರಿದ್ದರೆ ಸರ್ವೆ ಸೆಟ್ಲಮೆಂಟ್ / ಫಾರೆಸ್ಟ್ ಸೆಟ್ಲಮೆಂಟ್ ನಂತರ ಅಂತಹ ಜಮೀನುಗಳನ್ನು ಗುರುತಿಸಿ ಮುಂದಿನ ಕ್ರಮಜರುಗಿಸಲಾಗುವುದು.

2) ಕಾರ್ತಿಕೇಶ್ವರ ಗ್ರಾಮದ ಸ.ನಂ 01 ವಿಸ್ತೀರ್ಣ 1307 ಎಕರೆ ಜಮೀನು ಇದ್ದು ಕುಮಾರಸ್ವಾಮಿ ದೇವಸ್ಥಾನ ಹಾಗೂ ಸುಬ್ರಾಯನಹಳ್ಳಿ ಕ್ಯಾಂಪ್ ಇರುತ್ತದೆ. ಹಾಲಿ ಈ ಜಮೀನಿನಲ್ಲಿ ಯಾರದು ಸಾಗುವಳಿ ಹಾಗೂ ಅನುಭವದಲ್ಲಿ ಇರುವುದಿಲ್ಲ ಮತ್ತು ಈ ಜಮೀನು ಕಾರ್ತಿಕೇಶ್ವರ ಇನಾಂ ಜಮೀನಾಗಿರುವುದರಿಂದ ಈ ಗ್ರಾಮದ ಜಮೀನುಗಳಿಗೆ ಸರ್ವೆ ಸೆಟ್ಲಮೆಂಟ್ / ಫಾರೆಸ್ಟ್ ಸೆಟ್ಲಮೆಂಟ್ ಕಾರ್ಯ ನಡೆಯುತ್ತಿರುವುದರಿಂದ ಸದರಿ ಕಾರ್ಯವು ಪೂರ್ಣಗೊಂಡ ನಂತರ ಜಮೀನುಗಳ ಮಾಲೀಕತ್ವದ ಬಗ್ಗೆ ವಸ್ತುಸ್ಥಿತಿ ತಿಳಿದು ಬರುತ್ತದೆ.

3) ಆಕಾಶನಗರ ಮತ್ತು ಶಾಂತಿನಗರ ಕ್ಯಾಂಪ್‌ಗಳು ದೋಣಿಮಲೈ ಟೌನ್‌ಶಿಪ್ ನ ಪಕ್ಕದಲ್ಲಿ ಇದ್ದು, ಮೆ// ಎನ್.ಎಂ.ಡಿ.ಸಿ ಲಿಮಿಟೆಡ್ ಇವರು ತಮ್ಮ ಟೌನ್‌ಶಿಪ್

ಪ್ರದೇಶಕ್ಕೆ ಕಾಂಪೌಂಡು ಗೋಡೆ ಕಟ್ಟಿದ್ದರಿಂದ ಆಕಾಶ್‌ನಗರ ಮತ್ತು ಶಾಂತಿನಗರ ಕ್ಯಾಂಪ್‌ಗಳಿಗೆ ಸಂಪರ್ಕ ರಸ್ತೆ ಬಂದು ಆಗಿದ್ದು, ಈ ಸಮಸ್ಯೆಯನ್ನು ಮೆ// ಎನ್.ಎಂ.ಡಿ.ಸಿ ಲಿಮಿಟೆಡ್ ಇವರೊಂದಿಗೆ ಚರ್ಚಿಸಿ ಕಾಂಪೌಂಡುಗೋಡೆಯನ್ನು ತೆರವುಗೊಳಿಸಿ ಆಕಾಶ್‌ನಗರ ಹಾಗೂ ಶಾಂತಿನಗರ ಕ್ಯಾಂಪ್‌ನ ಜನರಿಗೆ ರಸ್ತೆ ಸಂಪರ್ಕ ಕಲ್ಪಿಸಲಾಗಿರುತ್ತದೆ.

ಈ ಮೇಲಿನ ಅಂಶಗಳನ್ನು ಮಾನ್ಯರ ಅವಗಾಹನೆಗೆ ತರಲಾಗಿದೆ.

ತಮ್ಮ ವಿಶ್ವಾಸಿ

ಜಿಲ್ಲಾಧಿಕಾರಿಗಳು
ಬಳ್ಳಾರಿ